


بسم اللهِ الرّحمٰن الرّحيم

# ವಪ್ರವಾದಿ ಚರಿತ್ರೆ – ಪೈಗಂಬರ್(ಸ)ರ ಕಾಲದ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **07–02–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ - بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಖೈಬರ್ ಯುದ್ಧದ ಪ್ರಸ್ತಾಪ ನಡೆಯುತ್ತಿತ್ತು. ಹಝ್ರತ್ ಪೈಗಂಬರ್(ಸ) ಖೈಬರಿನ ಕಡೆಗೆ ಹೊರಟ ಬಗ್ಗೆಗಿನ ವಿವರಣೆ ಹೀಗಿದೆ: ಹಝ್ರತ್ ಪೈಗಂಬರ್(ಸ)ರ ನಾಯಕತ್ವದಲ್ಲಿ 1600 ತ್ಯಾಗಶೀಲರ ಸೈನ್ಯ ಮದೀನದಿಂದ ಹೊರಟಿತು. ಹೊರಡುವುದಕ್ಕೆ ಮುಂಚಿತವಾಗಿ ಹಝ್ರತ್ ಪೈಗಂಬರ್(ಸ) ಒಂದು ಗುಪ್ತಚರ ಸಂಘವನ್ನು ಮುಂದಕ್ಕೆ ಕಳುಹಿಸಿದ್ದರು. ಸೇನೆಗೆ ಮುಂದೆಮುಂದೆಯಾಗಿ ಇದ್ದುಕೊಂಡು ಮಾರ್ಗಗಳ ಬಗ್ಗೆ ಮತ್ತು ಸ್ಥಿತಿಗತಿಗಳ ಗೊತ್ತುಮಾಡುವುದು ಆ ಸಂಘದ ಕೆಲಸವಾಗಿತ್ತು. ಆ ಸಂಘದ ನಾಯಕ ಹಝ್ರತ್ ಅಬಾದ್ ಬಿನ್ ಬಿಶ್ರ್ ಆಗಿದ್ದರು. ಖೈಬರಿನ ಮಾರ್ಗಗಳನ್ನು ತಿಳಿಯಲಿಕ್ಕಾಗಿ ಎರಡು ಮಾರ್ಗದರ್ಶಿಗಳನ್ನು ಕೂಲಿ ಕೊಟ್ಟು ಇರಿಸಲಾಗಿತ್ತು. ಮದೀನದಿಂದ ಖೈಬರಿನ ಕಡೆಗೆ ಹೋಗುತ್ತಾ ಅನೇಕ ಸ್ಥಳಗಳಲ್ಲಿ ತಂಗುತ್ತಾ ಸುಹ್‌ಬಾ ಎಂಬ ಪ್ರದೇಶದಲ್ಲಿ ಡೇರೆ ಹಾಕಲಾಯಿತು. ನಮಾಝಿನ ಸಮಯವಾದಾಗ ಅಲ್ಲಿ ನಮಾಝ್ ನಿರ್ವಹಿಸಲಾಯಿತು. ಬುಖಾರಿಯಲ್ಲಿ ಹೀಗೆ ವರದಿಯಾಗಿದೆ: ಸುಹ್‌ಬಾದಲ್ಲಿ ಹಝ್ರತ್ ಪೈಗಂಬರ್(ಸ) ಅಸರಿನ ನಮಾಝ್ ನಿರ್ವಹಿಸಿದರು. ಅನಂತರ ಆಹಾರವನ್ನು ತರಿಸಲಾಯಿತು. ಸೈನಿಕರ ಬಳಿ ಹುರಿದ ಧಾನ್ಯದ ಪುಡಿ ಮಾತ್ರ ಇತ್ತು. ಹಝ್ರತ್ ಪೈಗಂಬರ್(ಸ) ಮತ್ತು ಸಹಾಬಿಯರು ಅದನ್ನೇ ಸೇವಿಸಿದರು. ವರದಿಗಾರ ಹೇಳುತ್ತಾರೆ: ಅನಂತರ ಹಝ್ರತ್ ಪೈಗಂಬರ್(ಸ) ಮಗ್ರಿಬಿನ ನಮಾಝಿಗಾಗಿ ಎದ್ದರು ಮತ್ತು ಬಾಯಿ ಮುಕ್ಕಳಿಸಿದರು. ನಾವು ಸಹ ಬಾಯಿ ಮುಕ್ಕಳಿಸಿದೆವು. ಅನಂತರ ಹಝ್ರತ್ ಪೈಗಂಬರ್(ಸ) ನಮಾಝ್ ಸಲ್ಲಿಸಿದರು. ಪುನಃ ವುಝೂ ಮಾಡಲಿಲ್ಲ.

ಯಾತ್ರೆಯ ವೇಳೆ ಕೆಲವು ಘಟನೆಗಳು ನಡೆದುವು. ತುರ್ತು ಪರಿಸ್ಥಿತಿಗಳಲ್ಲೂ ಹಝ್ರತ್ ಪೈಗಂಬರ್(ಸ) ಸಹಾಬಿಯರ ತರಬೇತಿಯ ಬಗ್ಗೆ ಎಷ್ಟು ಕಾಳಜಿ ವಹಿಸುತ್ತಿದ್ದರು ಎಂಬುದು ಇದರಿಂದ ಗೊತ್ತಾಗುತ್ತದೆ. ಅವರು ಶಿಸ್ತು ಮತ್ತು ಅನುಸರಣೆಯಂತಹ ಗುಣಗಳನ್ನು ಉಂಟುಮಾಡುವುದರ ಬಗ್ಗೆ ಗಮನ ಸೆಳೆಯುತ್ತಿದ್ದರು. ಹೀಗೊಂದು ಘಟನೆ ವರದಿಯಾಗಿದೆ. ಒಂದು ರಾತ್ರಿ ಸೇನೆಯ ಮುಂದೆ ಮುಂದೆಯಾಗಿ ಒಂದು ಹೊಳೆಯುವ ವಸ್ತು ಚಲಿಸುತ್ತಿರುವುದಾಗಿ ಕಂಡುಬಂತು. ಹಝ್ರತ್ ಪೈಗಂಬರ್(ಸ) ಚಿಂತಿತರಾದರು. ಅದರ ಬಗ್ಗೆ ಗೊತ್ತು ಮಾಡಲಾದಾಗ, ಇಸ್ಲಾಮಿನ ಸೇನೆಯ ಒಬ್ಬ ಸೈನಿಕ ಸೇನೆಯನ್ನು ಬಿಟ್ಟು ಮುಂದೆ ಮುಂದೆಯಾಗಿ ಹೋಗುತ್ತಿದ್ದರು ಎಂದೂ ಅವರ ತಲೆಯ ಕವಚ (ಶಿರಸ್ತ್ರಾಣ) ಚಂದ್ರನ ಬೆಳಕಿನಲ್ಲಿ ಹೊಳೆಯುತ್ತಿತ್ತು ಎಂದೂ ತಿಳಿದುಬಂತು. ಅವರ ಹೆಸರು ಅಬೂಅಬಸ್ ಎಂದಾಗಿತ್ತು. ಅವರನ್ನು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ತರಲಾದಾಗ ಹಝ್ರತ್ ಪೈಗಂಬರ್(ಸ) ಅವರನ್ನು ಉಪದೇಶಿಸುತ್ತಾ 'ಸೇನೆಯ ಜೊತೆಗೆ ಹೋಗಬೇಕು' ಎಂದು ಹೇಳಿದರು.

ಹಝ್ರತ್ ಪೈಗಂಬರ್(ಸ) ಬನೂ ಗ್‌ತ್‌ಫಾನಿನ ಕಡೆಗೆ ಮೈತ್ರಿಯ ಸಂದೇಶವನ್ನು ಕೂಡ ಕಳುಹಿಸಿದ್ದರು. ಬನೂ ಗ್‌ತ್‌ಫಾನ್ ಗೋತ್ರದವರು ಖೈಬರಿನ ಗೋತ್ರವನ್ನು ಸಹಾಯ ಮಾಡುವುದಾಗಿ ವಾಗ್ದಾನ ಮಾಡಿದ್ದಾಗಿಯೂ ಇಸ್ಲಾಮಿನ ಸೇನೆ ಖೈಬರಿಗೆ ತಲುಪುವುದಕ್ಕೆ ಮುಂಚಿತವಾಗಿಯೇ ಮಾರ್ಗದಲ್ಲೇ ಅದರ ಮೇಲೆ ದಾಳಿ ನಡೆಸಲಿಕ್ಕಾಗಿ ಅವರು ಈಗ ನಾಲ್ಕು ಸಾವಿರ ಸೈನಿಕರೊಂದಿಗೆ ಬರುತ್ತಿರುವುದಾಗಿಯೂ ಹಝ್ರತ್ ಪೈಗಂಬರ್(ಸ)ರಿಗೆ ಮಾಹಿತಿ ಲಭಿಸಿತ್ತು. ಬನೂ ಗ್‌ತ್‌ಫಾನ್ ಗೋತ್ರವನ್ನು ಹಝ್ರತ್ ಪೈಗಂಬರ್(ಸ) ಸಂಪರ್ಕಿಸಿದರು ಮತ್ತು ಅವರಿಗೆ ಒಂದು ಪತ್ರವನ್ನು ಕಳುಹಿಸಿದರು. ಖೈಬರ್‌ನೊಂದಿಗೆ ನಡೆಯುವ ಯುದ್ಧದಲ್ಲಿ ಅವರು ಯಾವ ಪಕ್ಷದೊಂದಿಗೂ ಸೇರದಿರಲು ಅದರಲ್ಲಿ ಬರೆಯಲಾಗಿತ್ತು. ನನಗೆ ವಿಜಯ ನೀಡುವನು ಎಂದು ನನ್ನೊಡನೆ ಅಲ್ಲಾಹನು ವಾಗ್ದಾನ ಮಾಡಿದ್ದಾನೆ ಎಂದು ಅದರಲ್ಲಿ ಸ್ಪಷ್ಟಪಡಿಸಲಾಗಿತ್ತು. ಆದರೆ 1600 ಮುಸ್ಲಿಮರ ಮುಂದೆ ಹದಿನೈದು ಸಾವಿರ ಯೋಧರ ಸೇನೆ ಮತ್ತು ಸುದೃಢವಾದ ಕೋಟೆಗಳ ಅಹಂಕಾರ ಅವರ ತಲೆಗಳಿಗೆ ಹತ್ತಿಕೊಂಡಿತ್ತು. ಆದ್ದರಿಂದ ಅವರು ಹಝ್ರತ್ ಪೈಗಂಬರ್(ಸ) ಮುಂದಿರಿಸಿದ ಪ್ರಸ್ತಾಪವನ್ನು ನಿರಾಕರಿಸಿದರು.

ಆಗ ಹಝ್ರತ್ ಪೈಗಂಬರ್(ಸ) ಖಝ್ರಜ್ ಗೋತ್ರದ ಸರದಾರ ಮತ್ತು ನಿಷ್ಠಾವಂತ ಸಹಾಬಿಯಾದ ಹಝ್ರತ್ ಸಅದ್ ಬಿನ್ ಉಬಾದ(ರ)ರನ್ನು ಬನೂಗ್‌ತ್‌ಫಾನಿನ ಸೇನಾಧಿಪತಿ ಉಯೈನಾ ಬಿನ್ ಹಿಸ್ನ್‌ನ ಕಡೆಗೆ ಕಳುಹಿಸಿದರು. ಆತನು ಆ ಸಹಾಬಿಯನ್ನು ಕೋಟೆಯ ಹೊರಗೆ ಭೇಟಿಯಾದನು. ಅವರು ಆತನಿಗೆ ಹಝ್ರತ್ ಪೈಗಂಬರ್(ಸ)ರ ಸಂದೇಶವನ್ನು ಕೊಟ್ಟರು. ಆಗ ಉಯೈನಾ ಅವರೊಡನೆ ಹೇಳಿದನು: ನಾವು ನಮ್ಮ ಮಿತ್ರಪಕ್ಷವನ್ನು ಯಾವುದೇ ಸ್ಥಿತಿಯಲ್ಲೂ ಕೈಬಿಡಲಾರೆವು. ನಿಮಗೆ ಇರುವ ಶಕ್ತಿಯಾದರೂ ಎಷ್ಟು ಎಂದು ನಮಗೆ ಗೊತ್ತಿದೆ. ನೀವೇನಾದರೂ ಹೋರಾಡಿದರೆ ನೀವೆಲ್ಲರೂ ನಾಶವಾಗುವಿರಿ. ಖೈಬರಿನವರು ನೀವು ಸೋಲಿಸಿದ ಖುರೈಶಿಯರಂತಹ ಜನರಲ್ಲ. ನನ್ನ ಈ ಸಂದೇಶವನ್ನು ಮುಹಮ್ಮದ್‌ರಿಗೂ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ತಲುಪಿಸಿರಿ. ಆತನ ಅಹಂಭಾವದ ಉತ್ತರವನ್ನು ಕೇಳಿ ಹಝ್ರತ್ ಸಅದ್(ರ) ಆತನೊಡನೆ ಹೇಳಿದರು: ನಾನು

ಸಾಕ್ಷ್ಯವಹಿಸುತ್ತೇನೆ, ಹಝ್ರತ್ ಪೈಗಂಬರ್[ಸ] ಖಂಡಿತವಾಗಿಯೂ ನಿನ್ನ ಕೋಟೆಗೆ ಬರುವರು. ಈಗ ನಾವು ನಿನ್ನ ಮುಂದಿರಿಸಿದ ಕಾಣಿಕೆಯನ್ನು ಬೇಡಿಕೊಂಡು ನೀನು ನಮ್ಮ ಬಳಿಗೆ ಬರುವೆ. ಆದರೆ ಆಗ ನಿನಗೆ ಖಡ್ಗವಲ್ಲದೇ ಬೇರೇನೂ ಲಭಿಸದು. ಎಲೈ ಉಯೈನಾ, ನಾವು ಮದೀನದ ಯಹೂದಿಯರ ಅಂಗಳದಲ್ಲೂ ಪ್ರವೇಶಿಸಿದ್ದನ್ನು ಮತ್ತು ಅವರು ಹೀನಾಯವಾಗಿ ನಾಶವಾಗಿದ್ದನ್ನು ನಾನು ನೋಡಿದ್ದೇನೆ.

ದೈವಿಕ ಪ್ರತಾಪ ಮತ್ತು ಗ್ರತ್ಫಾನಿಯರ ಪರಾರಿಯ ಪ್ರಸ್ತಾಪ ಸಹ ಲಭಿಸುತ್ತದೆ. **ನುಸಿರ್ತು ಬಿರ್‍ರುಅ್‌ಬಿ** ಎಂದು ಹಝ್ರತ್ ಪೈಗಂಬರ್[ಸ] ಹೇಳಿದ್ದರು. ಎಂದರೆ ನನಗೆ ದೈವಿಕ ಪ್ರತಾಪದೊಂದಿಗೆ ನೆರವು ನೀಡಲಾಗಿದೆ. ಈ ಸಂಗತಿ ಮತ್ತೊಂದು ಬಾರಿ ಗ್ರತ್ಫಾನಿನ ಸೇನೆಗೆ ಸಂಬಂಧಿಸಿ ಪ್ರಕಟಗೊಂಡಿತು. ಮುಸ್ಲಿಮರು ಖೈಬರ್ ತಲುಪುವುದನ್ನು ತಡೆಯಲಿಕ್ಕಾಗಿ ಅವರ ನಾಲ್ಕು ಸಾವಿರ ಸೈನಿಕರ ಸೇನೆ ಇಸ್ಲಾಮಿನ ಸೈನ್ಯದ ಮೇಲೆ ದಾಳಿ ನಡೆಸಲು ಹಿಂಬಾಲಿಸುತ್ತಿತ್ತು. ಆದರೆ ಏನೋ ಒಂದು ದೈವಿಕ ವಿಧಿ ಪ್ರಕಟಗೊಂಡಿತು. ಆದ ಕಾರಣ ಅವರ ಈ ಸೇನೆ ದಿಢೀರನೇ ಹಿಮ್ಮೆಟ್ಟಿತು ಮತ್ತು ತಮ್ಮ ಮನೆಗಳ ಕಡೆಗೆ ಮರಳಿ ಹೋಯಿತು.

ಹಝ್ರತ್ ಪೈಗಂಬರ್[ಸ] ದಾಳಿ ನಡೆಸುವರು ಎಂದು ಯಹೂದಿಯರು ಭಾವಿಸಿರಲಿಲ್ಲ. ಏಕೆಂದರೆ ಅವರಿಗೆ ತಮ್ಮ ಕೋಟೆಗಳ, ಆಯುಧಗಳ ಮತ್ತು ವ್ಯಕ್ತಿಗಳ ಆಧಿಕ್ಯದ ಗರ್ವವಿತ್ತು. ಹಝ್ರತ್ ಪೈಗಂಬರ್[ಸ] ಅವರ ಬಳಿಗೆ ಬರುತ್ತಿದ್ದಾರೆ ಎಂದು ಯಹೂದಿಯರಿಗೆ ಗೊತ್ತಾದಾಗ ಪ್ರತಿದಿನ ಹತ್ತು ಸಾವಿರ ಯೋಧರು ಸಾಲು ಸಾಲಾಗಿ ಹೊರಗೆ ಬರುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು: ನೋಡಿ, ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ನಮ್ಮ ಮೇಲೆ ಸೈನಿಕ ದಾಳಿ ನಡೆಸುವರೇ? ಅದು ಅಸಾಧ್ಯ. ಹಝ್ರತ್ ಪೈಗಂಬರ್[ಸ] ಅವರ ಬಳಿಗೆ ತಲುಪಿದಾಗ ಬೆಳಿಗ್ಗೆ ಆಗುವ ವರೆಗೂ ಅವರಿಗೆ ಅದು ಗೊತ್ತಾಗಲಿಲ್ಲ. ಬೆಳಿಗ್ಗೆ ಯಹೂದಿಯರು ತಮ್ಮ ಕೋಟೆಗಳಿಂದ ಹೊರಗೆ ಬಂದರು. ಅವರ ಕೈಗಳಲ್ಲಿ ಕೊಡಲಿ ಮತ್ತು ಬುಟ್ಟಿಗಳು ಇದ್ದುವು. ಅವರು ಹಝ್ರತ್ ಪೈಗಂಬರ್[ಸ]ರನ್ನು ಕಂಡಾಗ ಓಡುತ್ತಾ ತಮ್ಮ ಕೋಟೆಗಳಲ್ಲಿ ಅಡಗಿದರು. ಹಝ್ರತ್ ಅನಸ್[ರ] ವರದಿ ಮಾಡುತ್ತಾರೆ: ಅವರು ಹಝ್ರತ್ ಪೈಗಂಬರ್[ಸ]ರನ್ನು ಕಂಡಾಗ ಅವರು ಹೇಳಿದರು: ಮುಹಮ್ಮದ್, ಅಲ್ಲಾಹನಾಣೆ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್), ಮತ್ತು ಸೇನೆ! ಹಝ್ರತ್ ಪೈಗಂಬರ್[ಸ] ಹೇಳಿದರು: **ಖರಿಬತ್ ಖೈಬರು! ಇನ್ನಾ ಇಧಾ ನಝಲ್‌ನಾ ಬಿಸಾಹತಿ ಖೌಮಿನ್ ಫಸಾಅ ಸಬಾಹುಲ್ ಮುಂಧರೀನ್**. ಎಂದರೆ, ಖೈಬರ್ ನಾಶವಾಯಿತು. ನಾವು ಯಾವುದಾದರೂ ಸಮುದಾಯದ ಅಂಗಣದಲ್ಲಿ ಇಳಿಯುವಾಗ ಮುನ್ನೆಚ್ಚರಿಕೆ ನೀಡಲ್ಪಟ್ಟವರ ಮುಂಜಾನೆ ಕೆಟ್ಟದ್ದಾಗಿರುತ್ತದೆ.

(ಹುಝೂರ್ ಹೇಳಿದರು:) ಖೈಬರಿನಲ್ಲಿ ಅನೇಕ ಕೋಟೆಗಳಿದ್ದುವು. ಅದರ ವಿವರಣೆಯನ್ನು ಹೇಳುವುದು ಸಹ ಅವಶ್ಯಕವಾಗಿದೆ. ಖೈಬರಿನ ಭೌಗೋಳಿಕ ವಿಂಗಡಣೆಗೆ ಸಂಬಂಧಪಟ್ಟು ಅದರ ಕೋಟೆಗಳ ಪ್ರಸ್ತಾಪ ಹೀಗಿದೆ: ಏಕೆಂದರೆ ಈ ಯುದ್ಧ ಕೋಟೆಗಳಿಗೆ ಸಂಬಂಧಿಸಿಯೇ ಆಗಿತ್ತು. ಒಂದರ ನಂತರ ಇನ್ನೊಂದರಂತೆ ಜಯಿಸಲಾಯಿತು. ಕೋಟೆಗಳ ಸಂಖ್ಯೆ ಮತ್ತು ಅವುಗಳ ಹೆಸರುಗಳ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಎಲ್ಲ ಗ್ರಂಥಗಳನ್ನು ನೋಡುವಾಗ ಹೀಗೆ ಹೇಳಬಹುದಾಗಿದೆ. ಖೈಬರಿನ ಪ್ರದೇಶ ನಿತಾಹ್, ಶಿಖ್ ಮತ್ತು ಕತೀಬ ಎಂಬೀ ಮೂರು ಭಾಗಗಳಲ್ಲಿ ವಿಂಗಡಿಸಲಾಗಿತ್ತು. ಇವುಗಳಲ್ಲಿ ಎಂಟು ಕೋಟೆಗಳು ಈ ಕೆಳಗಿನ ವಿಂಗಡಣೆ ಪ್ರಕಾರವಾಗಿದ್ದುವು. ನತಾಹ್‌ನಲ್ಲಿ ಮೂರು ಕೋಟೆಗಳಾದ ನಾಯಿಮ್, ಸುಅ್‌ಬ್ ಮತ್ತು ಝುಬೀರ್. ಶಿಖ್‌ನಲ್ಲಿ ಉಬ್ಬೀ ಮತ್ತು ಕೆಲವು ವರದಿಗಳ ಪ್ರಕಾರ ನಝ್ಝಾರ್ ಮತ್ತು ಕತೀಬದಲ್ಲಿ ಮೂರು ಕೋಟೆಗಳಾದ ಖಮೂಸ್, ವತೀಹ್ ಮತ್ತು ಸಲಾಲಮ್ ಇದ್ದವು.

ಯುದ್ಧ ಆರಂಭವಾಗುವುದಕ್ಕೆ ಮುಂಚಿತವಾಗಿ ಹಝ್ರತ್ ಪೈಗಂಬರ್[ಸ] ಸಹಾಬಿಯರನ್ನು ಸಂಬೋಧಿಸಿ ಹ್ರಸ್ವವಾದ ಭಾಷಣವನ್ನು ಮಾಡುತ್ತಾ ಹೇಳಿದರು: ಶತ್ರುಗಳೊಡನೆ ಮುಖಾಮುಖಿಯಾಗಲು ಬಯಸಬೇಡಿರಿ. ಅಲ್ಲಾಹನಲ್ಲಿ ಸಂರಕ್ಷಣೆಯನ್ನು ಯಾಚಿಸಿರಿ. ನಿಮ್ಮನ್ನು ಯಾವ ಪರೀಕ್ಷಣೆಗೆ ಹಾಕಲಾಗುವುದು ಎಂದು ನಿಮಗೆ ಗೊತ್ತಿಲ್ಲ. ನೀವು ಶತ್ರುಗಳ ಮುಂದೆ ಬರುವಾಗ ಹೀಗೆ ದುಆ ಮಾಡಿರಿ: ಹೇ ಅಲ್ಲಾಹ್, ನೀನು ನಮ್ಮ ಮತ್ತು ಅವರ ಪರಿಪಾಲಕನಾಗಿರುವೆ. ಅವರ ಭವಿಷ್ಯ ಮತ್ತು ನಮ್ಮ ಭವಿಷ್ಯ ನಿನ್ನ ಕೈಯಲ್ಲಿವೆ. ನೀನೇ ಅವರನ್ನು ವಧಿಸುವೆ.

ನಾಯಿಮ್ ಎಂಬ ಕೋಟೆ ಯಹೂದಿಯರ ಅತ್ಯಂತ ಸುದೃಢವಾದ ಕೋಟೆಯಾಗಿತ್ತು. ಖೈಬರಿನ ಅತ್ಯಂತ ಧೈರ್ಯಶಾಲಿ ಮತ್ತು ಪ್ರಸಿದ್ಧ ಯೋಧ ಮರ್‌ಹಬ್ ಈ ಕೋಟೆಯ ಸಂರಕ್ಷಣೆಯ ನಾಯಕತ್ವ ವಹಿಸುತ್ತಿದ್ದನು. ವರದಿಗಳಿಂದ ತಿಳಿದುಬರುವುದೇನೆಂದರೆ, ಹಝ್ರತ್ ಪೈಗಂಬರ್[ಸ] ನಿರಂತರವಾಗಿ ಹತ್ತು ದಿನಗಳು ಯುದ್ಧ ಮಾಡುತ್ತಿದ್ದರು. ಪದೇ ಪದೇ ವಿಫಲರಾದ ಕಾರಣದಿಂದಲೂ ಸಹಾಬಿಯರು ಗಾಯಗೊಂಡ ಮತ್ತು ಎರಡು ಸಹಾಬಿಯರು ಹುತಾತ್ಮರಾದ ಕಾರಣದಿಂದಲೂ ಯಹೂದಿಯರ ಧೈರ್ಯ ಇನ್ನಷ್ಟು ಹೆಚ್ಚಾಗುತ್ತಿತ್ತು.

ಕೊನೆಗೆ ಒಂದು ರಾತ್ರಿ ಹಝ್ರತ್ ಪೈಗಂಬರ್[ಸ] ಹೇಳಿದರು: ಯಾರ ಕೈಗೆ ಅಲ್ಲಾಹನು ವಿಜಯವನ್ನು ದಯಪಾಲಿಸುವನೋ ಆ ವ್ಯಕ್ತಿಯ ಕೈಗೆ ನಾಳೆ ನಾನು ಧ್ವಜವನ್ನು ನೀಡುವೆನು. ಅವರು ಅಲ್ಲಾಹನನ್ನು ಮತ್ತು ಅವನ ಪ್ರವಾದಿಯನ್ನು ಪ್ರೀತಿಸುವವರಾಗಿದ್ದಾರೆ.

ಹಝ್ರತ್ ಮುಸ್ಲಿಹ್ ಮೌಊದ್[ರ] ಈ ಸಂಬಂಧವಾಗಿ ಹೇಳುತ್ತಾರೆ: ಈ ಪಟ್ಟಣದ ವಿಜಯವು ಹಝ್ರತ್ ಅಲಿ[ರ]ರ ಕೈಯಲ್ಲಿ ವಿಧಿಸಲಾಗಿದೆ ಎಂದು ಒಂದು ದಿನ ಅಲ್ಲಾಹನು ಹಝ್ರತ್ ಪೈಗಂಬರ್[ಸ]ರೊಡನೆ ಹೇಳಿದನು. ಹಝ್ರತ್ ಪೈಗಂಬರ್[ಸ] ಹಝ್ರತ್ ಅಲಿ[ರ]ರನ್ನು ಕರೆದು ಧ್ವಜವನ್ನು ಅವರಿಗೆ ಒಪ್ಪಿಸಿದರು. ಅವರು ಸಹಾಬಿಯರ ಸೈನ್ಯದ ಜೊತೆಗೆ ಕೋಟೆಗಳ ಮೇಲೆ ದಾಳಿ ನಡೆಸಿದರು. ಯಹೂದಿಯರು ಕೋಟೆಯ ಒಳಗೆ ಇದ್ದರು. ಆದರೂ ಅಲ್ಲಾಹನು ಹಝ್ರತ್ ಅಲಿ[ರ] ಮತ್ತು ಇತರ ಸಹಾಬಿಯರಿಗೆ ಆ ದಿನದಂದು ಎಷ್ಟು ಶಕ್ತಿ ನೀಡಿದನು ಎಂದರೆ, ಸಂಜೆಯಾಗುವುದರೊಳಗೆ ಕೋಟೆಯನ್ನು

ಜಯಿಸಲಾಯಿತು. ಯಹೂದಿಯರು ಪರಾಜಿತರಾದಾಗ ಮತ್ತು ನಾಯಿಮ್ ಕೋಟೆಯ ಮೇಲೆ ಮುಸ್ಲಿಮರ ದಾಳಿಯನ್ನು ತಡೆಯಲು ಅವರಿಗೆ ಸಾಧ್ಯವಾಗದೇ ಬಂದಾಗ ಅವರು ಸುಲ್‌ಬ್ ಮಿನ್ ಮುಆಧ್ ಕೋಟೆಗೆ ಸ್ಥಳಾಂತರಗೊಂಡರು. ಆದ್ದರಿಂದ ನಾಯಿಮ್ ಕೋಟೆಯ ಯುದ್ಧದಲ್ಲಿ ಯಾವನೇ ಯಹೂದಿ ಕೂಡ ಮುಸ್ಲಿಮರ ಕೈಗಳಲ್ಲಿ ಬಂಧಿತರಾಗಲಿಲ್ಲ. (ಹುಝೂರ್ ಹೇಳಿದರು:) ಇತರ ಕೋಟೆಗಳ ಬಗ್ಗೆಗಿನ ಘಟನೆಗಳ ಇನ್ನಷ್ಟು ವಿವರಣೆ ಸಹ ಮುಂದಿನ ಬಾರಿ ಹೇಳಲಾಗುವುದು. ಇನ್‌ಶಾ ಅಲ್ಲಾಹ್.

(ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ನಾನು ದುಆ ಮಾಡಲು ಹೇಳುತ್ತಿರುತ್ತೇನೆ. ಲೋಕದ ಸ್ಥಿತಿಗಳ ಬಗ್ಗೆ, ಮುಸ್ಲಿಮರ ಅವಸ್ಥೆಗಳ ಬಗ್ಗೆ. ಲೋಕದ ಮುಸ್ಲಿಮರಿಗಾಗಿ, ವಿಶೇಷವಾಗಿ ಪೆಲಸ್ತೀನಿಯರಿಗಾಗಿ ಸಾಕಷ್ಟು ಪ್ರಾರ್ಥಿಸಿರಿ. ಕದನ ವಿರಾಮವಾದರೆ ಸ್ಥಿತಿಗತಿಗಳು ಸುಧಾರಿಸುವುದು ಎಂದು ಭಾವಿಸಿ ಜನರು ಸಂತೋಷಪಡುತ್ತಿದ್ದಾರೆ ಎಂದು ಅವರನ್ನು ನೋಡುವಾಗ ತೋರುತ್ತಿದೆ. ಆದರೆ ಅವಸ್ಥೆ  ಮತ್ತಷ್ಟು ಹದಗೆಡುತ್ತಿದೆ. ಅಮೆರಿಕದ ಹೊಸ ಅಧ್ಯಕ್ಷರ ಕಾರ್ಯನೀತಿ ಮತ್ತು ಯೋಜನೆಯು ಕ್ರೌರ್ಯದ ಮತ್ತೊಂದು ತೀವ್ರತೆಯನ್ನು ತಲುಪಿದೆ. ಹೊಸ ಅಧ್ಯಕ್ಷರು ನಮ್ಮ ದೇಶಕ್ಕೆ ಅಪಾಯಕಾರಿಯಾದರೂ ಹೊರಗಿನ ಜಗತ್ತಿನ ಕಾರ್ಯಗಳಲ್ಲಿ ಅವರು ಮಧ್ಯೆ ಪ್ರವೇಶಿಸಲಾರರು ಎಂದು ಅಮೇರಿಕನ್ನರು ಮೊದಲು ಹೇಳುತ್ತಿದ್ದರು. ಆದರೆ ಈಗ ಅವರು ಇಡೀ ಜಗತ್ತಿಗೆ ಅಪಾಯಕಾರಿಯಾಗಿದ್ದಾರೆ. ಅಲ್ಲಾಹನು ಪೆಲಸ್ತೀನಿಯರ ಮೇಲೆ ಕರುಣೆ ತೋರಲಿ, ಲೋಕದ ಮೇಲೆ ಕರುಣೆ ತೋರಲಿ ಮತ್ತು ಅವರನ್ನು ರಕ್ಷಿಸಲಿ. ಅರಬ್ ದೇಶಗಳು ಈಗಾಲಾದರೂ ತಮ್ಮ ಕಣ್ಣುಗಳನ್ನು ತೆರೆದು ಒಗ್ಗಟ್ಟನ್ನು ಸ್ಥಾಪಿಸಲು ಪ್ರಯತ್ನಿಸಲಿ. ಅದಲ್ಲದೇ ಬೇರೆ ಮಾರ್ಗವಿಲ್ಲ. ಇಲ್ಲದಿದ್ದರೆ, ಪೆಲಸ್ತೀನ್ ಮಾತ್ರವಲ್ಲ, ಇತರ ಅರಬ್ ದೇಶಗಳು ಕೂಡ ಕಠಿಣವಾದ ಕಷ್ಟಗಳನ್ನು ಎದುರಿಸಬೇಕಾಗುವುದು. ಈಗ ಕೆಲವು ಮುಸ್ಲಿಮೇತರರು ಕೂಡ ಪೆಲಸ್ತೀನಿಯರ ಪರವಾಗಿ ಮತ್ತು ಅವರ ಮೇಲೆ ಆಗುತ್ತಿರುವ ದಬ್ಬಾಳಿಕೆಯ ವಿರುದ್ಧ ಧ್ವನಿ ಎತ್ತುತ್ತಿದ್ದಾರೆ. ಆದರೆ ತಮ್ಮ ಅಧಿಕಾರದ ಮತ್ತಿನಲ್ಲಿರುವ ಪ್ರಬಲರು ಯಾರ ಮಾತನ್ನೂ ಕೇಳಲು ತಯಾರಲ್ಲ. ಆದ್ದರಿಂದ ಮುಸ್ಲಿಮರು ಬಹಳಷ್ಟು ಗಮನಹರಿಸಬೇಕಾಗಿದೆ. ನಾವು ಅವರಿಗಾಗಿ ಪ್ರಾರ್ಥಿಸಬೇಕಾಗಿದೆ. ನಮ್ಮ ಬಳಿ ಬೇರೆ ಯಾವುದೇ ಶಕ್ತಿಯಿಲ್ಲ.

ಅದೇ ರೀತಿಯಲ್ಲಿ ಪಾಕಿಸ್ತಾನದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅವರ ಸ್ಥಿತಿಗಳು ಕೂಡ ಕೆಲವೊಮ್ಮೆ ಕೆಲವು ದಿನಗಳಲ್ಲಿ ವಿರೋಧ ಬಹಳ ಹೆಚ್ಚು ತೀವ್ರಗೊಳ್ಳುತ್ತವೆ. ಬಾಂಗ್ಲಾದೇಶದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರನ್ನು ಎಲ್ಲ ವಿಧದ ವಿರೋಧಗಳಿಂದ ಮತ್ತು ಹಲ್ಲೆಗಳಿಂದ ರಕ್ಷಿಸಲಿ. ಇತರ ಸ್ಥಳಗಳ ಪೀಡಿತರಿಗಾಗಿಯೂ ದುಆ ಮಾಡಿರಿ. ಪೀಡಿತ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರೆಲ್ಲರನ್ನು ತನ್ನ ಸಂರಕ್ಷಣೆ ಮತ್ತು ಅಭಯದಲ್ಲಿ ಇರಿಸಲಿ. ಲೋಕಕ್ಕೆ ಬುದ್ಧಿ ನೀಡಲಿ. ಅವರೆಲ್ಲರಿಗೂ ಶಾಂತಿ ಸ್ಥಾಪಿಸುವ ಬಗ್ಗೆ ಗಮನ ಉಂಟಾಗಲಿ. ಅಲ್ಲಾಹನು ನಮಗೆ ದುಆ ಮಾಡಲು ಸೌಭಾಗ್ಯ ನೀಡಲಿ. (ಆಮೀನ್).

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ـ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِی الْقُرْبٰی
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*
At, ***'Masjid Mubarak',*** *Islamabad, Tilford,* U.K. On 07-02-2025
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim | ***Layout**:* Basheer K.P. Manjeshwar
***Published By**:* Kannada Isha'at Team for Nazarath Nashr-O-Isha'ath, Qadian
***Email**: khutuba.kannada@gmail.com*
**You can find all the Sermons archived at**: www.alislam.org/friday-sermon